

ಗಿರಿಶಿಖರ, ಹಸಿರ ಆವರಣದ ಪ್ರಭೆಯು ಸಿಕ್ಕಿಂನ ಈ ಬುದ್ಧೋದ್ಯಾನದಲ್ಲಿನ ಬುದ್ಧ ಪರಿಸರಪ್ರಜ್ಞೆಯ ಸಾಕ್ಷಿಪ್ರಜ್ಞೆಯಂತಿದ್ದಾನೆ.

ಎಂಬ ಪ್ರತಿಜ್ಞಾಮಂತ್ರವನ್ನು ಉಚ್ಚರಿಸುತ್ತಾರೆ. ಈ ಪ್ರತಿಜ್ಞಾಮಂತ್ರವು ಬೌದ್ಧಧರ್ಮದ ಅಷ್ಟಾಂಗ ಶೀಲದ ಮೊದಲ ಮಂತ್ರ.

ಬೌದ್ಧಧರ್ಮದ 'ಮೆಟ್ಟ ಸೂತ್ರ'ದಲ್ಲಿ (ವಿಶ್ವಮೈತ್ರಿ ಸೂಕ್ತದಲ್ಲಿ) ಬರುವ ಸಾಲುಗಳಾದ 'ಸಬ್ಬೆ ಸತ್ತಾ, ಸಬ್ಬೆ ಪಾನ, ಸಬ್ಬೆ ಭೂತ, ಸಬ್ಬೆ ಪುಗ್ಗಲ, ಸಬ್ಬೆ ಅತ್ತಾಭವ ಪರಿಯಾಪನ್ನ, ಅವೆರ ಹೋಂತು, ಅಬ್ಯಪಜ್ಜಾ: ಹೋಂತು' ಎಂಬುದರ ಅರ್ಥ — 'ವಿಶ್ವದ ಎಲ್ಲ ಮನುಷ್ಯರು, ಎಲ್ಲ ಜೀವಸಂಕುಲಗಳು, ಪಂಚಭೂತಗಳು, ಪ್ರತಿಯೊಂದು ಜೀವಿಯೂ, ಕಾಯಾ ಮನಸಾ ಶತ್ರುಭಾವದಿಂದ ಮತ್ತು ಅವಘಡಗಳಿಂದ ದೂರವಿರಲಿ ಹಾಗೂ ಮಾನಸಿಕ ಕಷ್ಟಗಳಿಂದ ಮುಕ್ತವಾಗಿರಲಿ' ಎಂದಾಗಿದೆ. ಈ ಸಾಲುಗಳು ಬೌದ್ಧಧರ್ಮದಲ್ಲಿ ಜೀವನ ಹಾಗೂ ಜೀವಸಂಕುಲದ ಬಗ್ಗೆ ಆಳವಾಗಿರುವ ಗೌರವ ಹಾಗೂ ಪ್ರೇಮವನ್ನು ಪ್ರತಿಬಿಂಬಿಸುತ್ತವೆ.

ಜೀವಿಗಳಲ್ಲಿರುವ ಪರಸ್ಪರ ಸಂಬಂಧ ಮತ್ತು ಅವಲಂಬನೆಗಳಿಂದಾಗಿ ಈ ವಿಶ್ವದಲ್ಲಿ ಜೀವಜಾಲಗಳೇ ನಿರ್ಮಾಣವಾಗಿವೆಯೆಂಬುದು ಪರಿಸರಶಾಸ್ತ್ರದ ಮೂಲಭೂತ ತತ್ವವಾಗಿದೆ. ಈ ತತ್ವವನ್ನು ವಿವರಿಸುವಂತಹ ಸಾಲುಗಳು ಭಗವಾನ್ ಬುದ್ಧರ ಬೋಧನೆಗಳಲ್ಲಿ ಒಂದಾದ 'ಪ್ರತಿತ್ಯಸಮುತ್ಪಾದ'ದಲ್ಲಿವೆ, ಅವು ಹೀಗಿವೆ: 'ಇಮಸ್ಮಿಮ್ ಸತಿ ಇದಮ್ ಹೋತಿ, ಇಮಸ್ಸುಪ್ಪಾದ ಇದಮ ಉಪ್ಪಜ್ಜತಿ, ಇಮಸ್ಮಿಮ್ ಅಸತಿ ಇದಂ ನ ಹೋತಿ, ಇಮಸ್ಸ ನಿರೋಧ ಇದಂ ನಿರುಜ್ಜಹತಿ'. ಅಂದರೆ, 'ಯಾವಾಗ ಅದು ಇರುತ್ತದೋ ಆಗ ಮತ್ತೊಂದೂ ಇರುತ್ತದೆ; ಯಾವಾಗ ಒಂದರ ಉಗಮವಾಗುತ್ತದೆಯೋ ಆಗ ಮತ್ತೊಂದರ ಉಗಮವೂ ಆಗುತ್ತದೆ; ಯಾವಾಗ ಅದು ಇರುವುದಿಲ್ಲವೋ ಆಗ ಮತ್ತೊಂದೂ ಇರಲಾರದು; ಯಾವಾಗ ಒಂದು ನಾಶವಾಗುತ್ತದೆಯೋ ಆಗ ಇನ್ನೊಂದೂ ನಾಶವಾಗುತ್ತದೆ'. ಈ ಬೋಧನೆಯು ನಾವು ಕಾಣುವ ಆಹಾರಜಾಲ ಮತ್ತು ಆಹಾರಚಕ್ರಗಳನ್ನು ಸುಲಭ ರೀತಿಯಲ್ಲಿ ಮನದಟ್ಟು ಮಾಡಿಕೊಡುತ್ತದೆ.

ಅನೇಕ ಕಾರಣಗಳಿಂದ, ಇಡೀ ವಿಶ್ವದಲ್ಲಿ ನಡೆಯುತ್ತಿರುವ ಪರಿಸರ ನಾಶ, ಜೈವಸಂಪತ್ತಿನ ಅಶಾಸ್ತ್ರೀಯ ಮತ್ತು ಅಮಿತ ಬಳಕೆ ಹಾಗೂ ಸುಸ್ಥಿರವಲ್ಲದ ಅಭಿವೃದ್ಧಿ ಕಾರ್ಯಗಳಿಂದಾಗಿ ಜೀವಸಂಪತ್ತು ಮತ್ತು ಇತರೆ ಸ್ವಾಭಾವಿಕ ಸಂಪತ್ತುಗಳು ಕಡಿಮೆಯಾಗುತ್ತಿದೆ. ಇಂತಹ ಸಂದರ್ಭದಲ್ಲಿ ಭಗವಾನ್ ಬುದ್ಧರ 'ಮಧ್ಯಮ ಪ್ರತಿಪದ' ಅಂದರೆ 'ಮಧ್ಯಮ ಮಾರ್ಗ' ಉಪದೇಶಗಳು ಪರಿಸರ ಸಂರಕ್ಷಣೆ ಮತ್ತು ಸುಸ್ಥಿರ ಅಭಿವೃದ್ಧಿಗೆ ಮಾರ್ಗಗಳನ್ನು ತೋರಿಸುತ್ತವೆ.

ಬುದ್ಧರ ದಮ್ಮಪದ (ಧರ್ಮಪದ) ಎಂಬ ಉಪದೇಶಗಳ ಸಂಗ್ರಹಣೆಯ ಒಂದು ಭಾಗವಾದ 'ಪುಪ್ಪ ವಗ್ಗ'ದಲ್ಲಿ 'ಅಥಾಪಿ ಭ್ರಮರೋ ಪುಪ್ಪಂ ವನ್ನಗಂಧಂಹೇತಯಮ್. ಫಲೇತಿ ರಸಮಾದಾಯ, ಎವಂ ಗಾಮೇ ಮುನಿ ಚರೆ' ಎಂಬ ಉಪದೇಶವಿದೆ. 'ಯಾವ ರೀತಿಯಲ್ಲಿ ಭ್ರಮರವು ಹೂವಿನ ಬಣ್ಣ, ಸೌಂದರ್ಯ ಮತ್ತು ಸುಗಂಧಕ್ಕೆ ಧಕ್ಕೆಬಾರದಂತೆ ಮಕರಂದವನ್ನು ಹೀರಿ ಹಾರಿಹೋಗುತ್ತದೆಯೋ ಅದೇ ರೀತಿಯಲ್ಲಿ ಮುನಿಗಳು ಗ್ರಾಮದಲ್ಲಿ ನಡೆದು ಆಹಾರವನ್ನು ಸಂಗ್ರಹಿಸಬೇಕು' ಎಂಬುದು ಈ ಉಪದೇಶದ ಅನುವಾದ. ಎಲ್ಲ ಮಾನವರಿಗೂ ಅನ್ವಯವಾಗುವ ಈ ಉಪದೇಶವನ್ನು ಅರ್ಥ ಮಾಡಿಕೊಂಡು ಪರಿಪಾಲಿಸಿದಲ್ಲಿ, ಎಲ್ಲ ಸ್ವಾಭಾವಿಕ ಸಂಪತ್ತುಗಳ ಪರಿಮಿತ ಬಳಕೆಯೂ ಆಗುತ್ತದೆ ಮತ್ತು ಸುಸ್ಥಿರವಾದ ಅಭಿವೃದ್ಧಿಯೂ ಆಗುತ್ತದೆ.

ಬುದ್ಧರು ತಮ್ಮ ಬೋಧನೆಗಳಲ್ಲಿ ಪ್ರಕೃತಿಯು ನಮಗೆ ನೀಡುವ ಸಂಪತ್ತುಗಳನ್ನು ಹಿತಮಿತವಾಗಿ ಬಳಸಿಕೊಂಡು ಸಂತೋಷ ಮತ್ತು ಸನ್ಮಾರ್ಗಗಳಿಂದ ಜೀವನವನ್ನು ಸಾಗಿಸಬೇಕೆಂದು ಹೇಳಿದ್ದಾರೆ. ಇದಕ್ಕೆ ಅವರು ಬೋಧಿಸಿರುವ ಮಧ್ಯಮ ಮಾರ್ಗಗಳು ಮತ್ತು ಅಷ್ಟಾಂಗಮಾರ್ಗಗಳೇ ಉದಾಹರಣೆ. ಅಷ್ಟಾಂಗಮಾರ್ಗದಲ್ಲಿ ಹೇಳಿರುವ 'ಸಮ್ಯಕ್ ದೃಷ್ಟಿ, ಸಮ್ಯಕ್ ಸಂಕಲ್ಪ, ಸಮ್ಯಕ್ ವಾಚ, ಸಮ್ಯಕ್ ಕರ್ಮಾಂತ, ಸಮ್ಯಕಾಜೀವ, ಸಮ್ಯಗ್ವ್ಯಾಯಾಮ, ಸಮ್ಯಕ್ ಸ್ಮೃತಿ, ಸಮ್ಯಕ್ಸಮಾಧಿ' ಅಂದರೆ 'ಸರಿಯಾದ ಆಲೋಚನೆ, ಮನಸ್ಸು, ನುಡಿ, ನಡೆ, ಜೀವನಕ್ರಮ, ಪ್ರಯತ್ನ, ಜ್ಞಾನ, ಮತ್ತು ಏಕಾಗ್ರತೆ'ಗಳನ್ನು ಪಾಲಿಸಿದರೆ ನಮಗೆ ಗೌರವಯುತವಾದ ಮತ್ತು ಸಂತೋಷದಿಂದ ಕೂಡಿದ ಜೀವನವನ್ನು ನಡೆಸಲೂ ಸಾಧ್ಯ ಮತ್ತು ಪ್ರಕೃತಿ ಹಾಗೂ ಪರಿಸರಕ್ಕೆ ಧಕ್ಕೆಯಾಗದ ರೀತಿಯಲ್ಲಿ ಸುಸ್ಥಿರ ಅಭಿವೃದ್ಧಿಯ ಪಥದಲ್ಲಿ ಸಾಗಲೂಬಹುದು.

ಅಷ್ಟಾಂಗಮಾರ್ಗದಲ್ಲಿ ಉಲ್ಲೇಖಿಸಲಾಗಿರುವ 'ಸರಿಯಾದ ಆಲೋಚನೆ ಮತ್ತು ಸರಿಯಾದ ಜ್ಞಾನ' ಎಂಬ ಚಿಂತನೆಗಳೇ ಬೌದ್ಧಧರ್ಮದಲ್ಲಿ ಪ್ರತಿಪಾದಿಸುವ ಆರ್ಥಿಕ ಬೆಳವಣಿಗೆಯ ನೀತಿಗೆ ತಳಹದಿಯೆಂದು ಹೇಳಬಹುದು. ಈ ಆರ್ಥಿಕ ನೀತಿಯ ಪ್ರಕಾರ — ಅಭಿವೃದ್ಧಿ ಕಾರ್ಯಗಳು ಸಂಕಟಗಳನ್ನು ಕಡಿಮೆ ಮಾಡುವಂತಿರಬೇಕು, ದುರಾಸೆಯಿಂದ ಕೂಡಿರಬಾರದು, ಅಹಿಂಸಾ ಮಾರ್ಗದಲ್ಲಿರಬೇಕು ಮತ್ತು ಸ್ವಾರ್ಥಕ್ಕೆ ಹೆಚ್ಚಿನ ಪ್ರಾಧಾನ್ಯತೆ ಇಲ್ಲದವಾಗಿರಬೇಕು. ಮಾತ್ರವಲ್ಲ, ಈ ಆರ್ಥಿಕ ನೀತಿಯು 'ಚಿಕ್ಕದು ಸುಂದರ ಮತ್ತು ಕಡಿಮೆಯೇ ಜಾಸ್ತಿ' ಎಂದು ಪ್ರತಿಪಾದಿಸುತ್ತ ಆಧುನಿಕ ಆರ್ಥಿಕ ಬೆಳವಣಿಗೆಗೆ ವಿರುದ್ಧವಾಗಿದೆ; ನೈತಿಕವೂ, ಸುಸ್ಥಿರವೂ ಮತ್ತು ಜೀವರಾಶಿಗಳ ಸಂರಕ್ಷಣೆಗೆ ಒತ್ತುನೀಡುವ ನೀತಿಯಾಗಿದೆ.

ಭೂತಾನಿನ ನಾಲ್ಕನೆಯ ರಾಜರಾಗಿದ್ದ ಜಿಗ್ಮೆ ಸಿಂಗ್ವೆ ವಾಂಗ್ಚುಕ್ 1972ರಲ್ಲಿ 'ಒಂದು ದೇಶದ ಸಮಗ್ರ ದೇಶೀಯ ಉತ್ಪಾದನೆ (ಗ್ರಾಸ್ ನ್ಯಾಷನಲ್ ಪ್ರಾಡಕ್ಟ್; ಜಿಎನ್‌ಪಿ) ಗಿಂತ ಆ ದೇಶದ ಸಮಗ್ರ ದೇಶೀಯ ಸಂತೋಷ (ಗ್ರಾಸ್ ನ್ಯಾಷನಲ್ ಹ್ಯಾಪಿನೆಸ್: ಜಿಎನ್‌ಎಚ್) ಬಹು ಮುಖ್ಯ' ಎಂಬ ಪರಿಕಲ್ಪನೆಯನ್ನು ಮಂಡಿಸಿದರು. ಆರ್ಥಿಕ ಬೆಳವಣಿಗೆಗಳು ಜನರ ಯೋಗಕ್ಷೇಮ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಗಳ ಜೊತೆಗೂಡಿ ಹೋದರೆ ಮಾತ್ರ ಅದು ಸಮತೋಲನವಾದ ಅಭಿವೃದ್ಧಿಯಾಗುತ್ತದೆಯೆಂಬ ಬೌದ್ಧಧರ್ಮದ ಅನುಯಾಯಿಯಾದ ಅವರ ಈ ಪರಿಕಲ್ಪನೆಯು ಪರಿಸರ ಮತ್ತು ಜೀವರಾಶಿಯ ಸಂರಕ್ಷಣೆ ಹಾಗೂ ಅವುಗಳ ಸುಸ್ಥಿರ ಬಳಕೆಗೆ ಆ ಧರ್ಮವು ತೋರಿಸಿರುವ ಬೆಳಕಲ್ಲವೇ?

ಪ್ರತಿಕ್ರಿಯಿಸಿ: feedback@sudha.co.in



ಬಿದ್ದ ಅರಳಿಯೆಲೆಯೂ ಬುದ್ಧನ ಹೆಸರು ಪಿಸುಗುಡುತ್ತಿರಬಹುದು